## ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 54/2022

ಫ್ರಾಸಾ : 02

ಚಾಸಾ : 02

| | | |
|---|---|---|
| ಹೆಸರು | : | ರವೀಂದ್ರ ನಾಯಕ್ |
| ತಂದೆಯ ಹೆಸರು | : | ಮಹಾಲಿಂಗ ನಾಯಕ್ |
| ಫ್ರಾಯ | : | 53 ವರ್ಷ |
| ಉದ್ಯೋಗ | : | ನಿರ್ವಾಹಕ ಕೆಎಸ್. ಆರ್. ಟಿಸಿ |
| ವಾಸಸ್ಥಳ | : | ಕಾಸರಗೋಡು, ಕೇರಳ |

---

ದಿಃ **29.09.2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

---

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1. ನಾನು 2002 ರಿಂದ ಕೇರಳದ ಕಾಸರಗೋಡು ಕೆಎಸ್.ಆರ್.ಟಿಸಿ ವಿಭಾಗದಲ್ಲಿ ನಿರ್ವಹಾಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಚಾಸಾ 1 ರವರು ಕಣ್ಣೂರು ಕೆಎಸ್.ಆರ್.ಟಿಸಿ ವಿಬಾಗದಲ್ಲಿ ಚಾಲಕರಾಗಿದ್ದರು. ದಿನಾಂಕ 25.06.2019 ರಂದು ನಾನು ಕಾಸರಗೋಡಿನಿಂದ ಪುತ್ತೂರಿಗೆ ಕೆಎಸ್.ಆರ್.ಟಿಸಿ ಬಸ್ ಸಂಖ್ಯೆ ಕೆಎಲ್-15-ಎ24 ರ ಬಸ್ ನ ನಿರ್ವಹಾಕನಾಗಿ ಹಾಗೂ ಚಾಸಾ 1 ರವರು ಚಾಲಕನಾಗಿ ಬೆಳಿಗ್ಗೆ 5.30 ರ ಸಮಯದಲ್ಲಿ ಕಾಸರಗೋಡಿನಿಂದ ಹೊರಟಿದ್ದು, ಬೆಳಿಗ್ಗೆ 6.50 ಕ್ಕೆ ಮೈರಾ ಎಂಬಲ್ಲಿ ಬಂದಾಗ ಒಂದು ಹುಡುಗಿ ಬಸ್ ನ್ನು ನಿಲ್ಲಿಸುವಂತೆ ಕೈ ತೋರಿಸಿದ್ದು, ಅದರಂತೆ ಚಾಸಾ 1 ರವರು ಬಸ್ ನ್ನು ನಿಲ್ಲಿಸಿದಾಗ ಒಂದು ಸ್ಕೂಟಿ ಸಂಖ್ಯೆ ಕೆಎ-19-ಇಕ್ಯೂ-8270 ರ ಸವಾರ ಸಹ ಸವಾರನನ್ನು ಕುಳ್ಳಿರಿಸಿಕೊಂಡು ಎಡ ಬಾಗದಿಂದ ಬಂದು ಬಸ್

ನ್ನು ಓವರ್ ಟೇಕ್ ಮಾಡಿ ಬಸ್ ನ ಮುಂಭಾಗಕ್ಕೆ ಬಂದು ಅಡ್ಡ ನಿಲ್ಲಿಸಿ ಅದರಲ್ಲಿ ಒಬ್ಬ ವ್ಯಕ್ತಿ ಕಲ್ಲಿನಿಂದ ಬಸ್ಸಿನ ಮುಂಬಾಗದ ಗ್ಲಾಸ್ ಗೆ ಹೊಡೆದಿರುತ್ತಾರೆ. ಅದರ ಪರಿಣಾಮ ಬಸ್ ನ ಗಾಜು ಒಡೆದು ಪುಡಿ ಪುಡಿಯಾಗಿ ಚಾಸಾ 1 ರವರಿಗೆ ಎಡ ಕೈ ಮತ್ತು ಹಣೆಯ ಬಾಗಕ್ಕೆ ರಕ್ತ ಗಾಯವಾಗಿರುತ್ತದೆ. ನಂತರ ಸದರಿ ವ್ಯಕ್ತಿಗಳು ಅಲ್ಲಿಂದ ಅವರ ದ್ವಿಚಕ್ರ ವಾಹನದಲ್ಲಿ ಹೊರಟು ಹೋಗಿರುತ್ತಾರೆ. ಸದರಿ ವ್ಯಕ್ತಿಗಳ ಕೃತ್ಯದಿಂದ ನಮ್ಮ ಸರ್ಕಾರಿ ಕೆಲಸಕ್ಕೆ ಅಡ್ಡಿ ಉಂಟಾಗಿರುತ್ತದೆ. ಬಸ್ಸಿನ ಗಾಜು ಹೊಡೆದ ಪರಿಣಾಮ ನನಗೆ ರೂ 35 ಸಾವಿರದಷ್ಟು ನಷ್ಟ ಉಂಟಾಗಿರುತ್ತದೆ. ನಂತರ ಬಸ್ ನ ಪ್ರಯಾಣಿಕರನ್ನು ಬೇರೆ ಬಸ್ ನಲ್ಲಿ ಕಳುಹಿಸಿ ನಾನು ಮತ್ತು ಚಾಸಾ 1 ರವರು ವಿಟ್ಲ ಠಾಣೆಗೆ ಹೋಗಿದ್ದು, ಚಾಸಾ 1 ರವರು ದೂರು ಕೊಟ್ಟಿರುತ್ತಾರೆ.

2. ನಂತರ ದಿನಾಂಕ 28.06.2019 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ 1 ರವರನ್ನು ಠಾಣೆಗೆ ಕರೆಸಿದ್ದು, ಅಲ್ಲಿ ಒಂದು ಸ್ಕೂಟಿಯನ್ನು ತೋರಿಸಿದ್ದು, ಸದರಿ ಸ್ಕೂಟಿಯನು ನಾನು ಮತ್ತು ಚಾಸಾ 1 ರವರು ನೋಡಿ ಗುರುತಿಸಿರುತ್ತೇವೆ. ನಂತರ ಠಾಣೆಯಲ್ಲಿ ಒಬ್ಬ ವ್ಯಕ್ತಿಯನು ತೋರಿಸಿದ್ದು, ಸದರಿ ವ್ಯಕ್ತಿ ಘಟನಾ ದಿನದಂದು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಕಲ್ಲಿನಿಂದ ಬಸ್ಸಿನ ಗಾಜನ್ನು ಹೊಡೆದಿದ್ದ ವ್ಯಕ್ತಿಯಾಗಿದ್ದು, ನಾನು ಆತನನ್ನು ನೋಡಿ ಗುರುತಿಸಿರುತ್ತೇನೆ. ನಂತರ ದಿನಾಂಕ 01-07-2019 ರಂದು ಪೋಲೀಸರು ನನ್ನನು ಮತ್ತು ಚಾಸಾ 1 ರವರನ್ನು ಠಾಣೆಗೆ ಕೆರೆಸಿ ಮತ್ತೊಬ್ಬ ವ್ಯಕ್ತಿಯನ್ನು ತೋರಿಸಿದ್ದು, ಸದರಿ ವ್ಯಕ್ತಿಯನ್ನು ನಾನು ನೋಡಿ ಗುರುತಿಸಿರುತ್ತೇನೆ. ಸದರಿ ವ್ಯಕ್ತಿಯ ಹೆಸರು ಜಯೇಶ್ ಎಂಬುದಾಗಿ ನನಗೆ ತಿಳಿದು ಬಂದಿರುತ್ತದೆ. ಆ ಸಂದರ್ಭದಲ್ಲಿ ಸದರಿ ವ್ಯಕ್ತಿ ಅಕ್ಷಯ್ ರಜಪೂತ್ ಎಂಬ ವ್ಯಕ್ತಿ ಅವರಿಗೆ ಹೇಳಿ ಕೊಟ್ಟ ಕಾರಣ ಆ ರೀತಿ ಕೃತ ಎಸಗಿರುವುದಾಗಿ ತಿಳಿಸಿರುತ್ತಾನೆ. ನಾನು ಠಾಣೆಯಲ್ಲಿ ಗುರುತಿಸಿದ ಇಬ್ಬರು ವ್ಯಕ್ತಿಗಳನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸದರಿ ದಿನದಂದು ಹಲ್ಲೆಗೆ ಬಳಸಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುವ ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮು.ಮಾ. 2 ಎಂದು ಗುರುತಿಸಲಾಗಿರುವ ಬಸ್ಸಿನ ಗಾಜಿನ ಚೂರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಎಪಿಪಿಯವರಿಂದಃ –**

3. ತಕ್ಷೀರಿನ ದಿನದಂದು 1 ಮತ್ತು 2 ನೇ ಆರೋೀಪಿತರು ಹಲ್ಲೆಗೆ ಮು.ಮಾ. 1 ಕಲ್ಲನ್ನು ಬಳಸಿದ್ದು, ಮು.ಮಾ. 2 ಸದರಿ ಬಸ್ ನ ಗಾಜಿನ ಚೂರು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಆ ದಿನ ಹಲ್ಲೆಗೆ ಬಳಸಿದ ಕಲ್ಲು ಹಾಗೂ ಅದರ ಪರಿಣಾಮ ಹೊಡೆದ ಬಸ್ಸಿನ ಗಾಜಿನ ಚೂರನ್ನು ನಾವು ಪೊಲೀಸರಿಗೆ ಆ ಸಂದರ್ಬದಲಲಿ ಹಾಜರುಪಡಿಸಿದ್ದು, ಈಗ ನ್ಯಾಯಾಲಯದ ಮುಂದೆ ತೋರಿಸುತ್ತಿರುವ ಕಲ್ಲು ಮತ್ತು ಗಾಜು ಬೇರೆಯಾದ್ದಾಗಿದೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಂಯಲ್ಲ.

**ಪಾಟೀ ಸವಾಲುಃ 1 ಮತ್ತು 2 ಆರೋಪಿತರ ಪರಃ ಶ್ರೀ ಪಿ.ಜೆ. ಆರ್. ವಕೀಲರಿಂದಃ**

4. ತಕ್ಷೀರಿನ ದಿನದಂದು ನಾನು ಸದರಿ ಬಸ್ಸಿನ ನಿರ್ವಾಹಕನಾಗಿ ಕೆಲಸ ಮಾಡಿದ ಬಗಗೆ ನನ್ನ ಬಳಿ ದಾಖಲೆ ಇಲ್ಲ. ಸಾಕ್ಷಿಯು ಮುಂದುವರಿದ ಇಲಾಖೆಯಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿ ದಿನದಂದು ಬಸ್ಸಿನಲ್ಲಿ ಸುಮಾರು 40 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು. ಮೈರಾ ಎಂಬ ಸ್ಥಳದಲ್ಲಿ ಇಳಿಯಲು

ಪ್ರಯಾಣಿಕರು ಇರಲಿಲ್ಲ. ಆದರೆ ಬಸ್ ಹತ್ತಲು ಪ್ರಯಾಣಿಕರು ಕಾಯುತ್ತಿದ್ದರು. ನನ್ನ ಪ್ರಕಾರ ಪ್ರಯಣಿಕರನ್ನು ಹತ್ತಿಸಿಕೊಳ್ಳಲು ಮೈರಾದಲ್ಲಿ ಬಸ್ ನಿಲ್ಲಿಸಿರುತ್ತೇವೆ. ಆ ಸಂದರ್ಬದಲ್ಲಿ ಬಸ್ಸನ್ನು ನಿಲ್ಲಿಸುವಂತೆ ಒಂದು ಹುಡುಗಿ ಕೈ ತೋರಿಸಿದ್ದು, ಅವರ ಹೆಸರು ಗೊತ್ತಿಲ್ಲ. ತಕ್ಷೀರು ಸ್ಥಳದಲ್ಲಿ ಕಲ್ಲು ಬಿಸಾಡಿದ ವ್ಯಕ್ತಿ ಯಾರು ಎಂದು ನನಗೆ ಆ ಸಂದರ್ಬದಲ್ಲಿ ಗೊತ್ತಾಗಿರಲಿಲ್ಲ. ಮೈರಾದಲ್ಲಿ ಬಸ್ ಹತ್ತಿದ ಹುಡುಗಿಯನ್ನು ಅಲ್ಲಿಗೆ ಬಂದು ಬಸ್ಸಿಗೆ ಕಲ್ಲು ಬಿಸಾಡಿದ ವ್ಯಕ್ತಿಗಳು ಯಾರು ಎಂದು ವಿಚಾರಿಸಿರುವುದಿಲ್ಲ. ಸದರಿ ದಿನದಂದು ಮೈರಾ ದಲ್ಲಿ ಬಸ್ ಹತ್ತಿದ ಹುಡುಗಿಯ ಬಗ್ಗೆ ನಾವು ಪೊಲೀಸರಿಗೆ ಹೇಳಿರುವುದಿಲ್ಲ ಹಾಗೂ ಪೊಲೀಸರು ಸಹ ನಮ್ಮನ್ನು ಕೇಳಿರುವುದಿಲ್ಲ.

5. ಅಡ್ಯನಡ್ಕ ಬಸ್ ನಿಲ್ದಾಣದ ನಂತರ ಮುಂದಿನ ನಿಲ್ದಾಣ ವಿಟ್ಲ ದಲ್ಲಿ ಸಿಗುತ್ತದೆ ಎಂದರೆ ಸರಿ. ಅಡ್ಯನಡ್ಕದಿಂದ ತಕ್ಷೀರು ಸ್ಥಳಕ್ಕೆ ಸುಮಾರು 6 ಕಿ.ಮೀ ಅಂತರ ಇದ್ದು, ತಕ್ಷೀರು ಸ್ಥಳದಿಂದ ವಿಟ್ಲ ಗೆ ಸುಮಾರು 4 ಕಿ.ಮೀ ಅಂತರ ಇದೇ ಎಂದರೆ ಸರಿ. ಅಡ್ಯನಡ್ಕ ದಿಂದ ವಿಟ್ಲ ಗೆ ಹೋಗುವ ರಸ್ತೆ ಹಳ್ಳಿ ಪ್ರದೇಶ ಎಂದರೆ ಸರಿ. ತಕ್ಷೀರು ಆದ ನಂತರ ಸದರಿ ಸ್ಥಳದ ಸ್ಥಳೀಯ ವ್ಯಕ್ತಿಗಳನ್ನು ಕೃತ್ಯ ಮಾಡಿದವರ ಬಗ್ಗೆ ವಿಚಾರಿಸಿರುವುದಿಲ್ಲ. ತಕ್ಷೀರು ಸ್ಥಳದ ಹತ್ತಿರ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ತಕ್ಷಿರು ಆದ ಸಂದರ್ಬದಲ್ಲಿ ಪ್ರಯಾಣಿಕರನ್ನು ಹೊರತು ಪಡಿಸಿ ಬೇರೆ ಸಾರ್ವಜನಿಕರು ಬರಲಿಲ್ಲ. ತಕ್ಷಿರು ಸಂದರ್ಬದಲಿ ಆರೋಪಿತರು ಒಟ್ಟು 3 ಕಲ್ಲುಗಳನ್ನು ಬಸ್ಸಿನ ಮುಂಬಾಗದ ಗಾಜಿಗೆ ಬಿಸಾಡಿರುತ್ತಾರೆ. ಆ ಸಂದರ್ಬದಲ್ಲಿ ನಾನು ಹಿಂದಿನ ಡೋರ್ ನಿಂದ 2 ಸೀಟು ಮುಂದಕ್ಕೆ ಮಧ್ಯದಲ್ಲಿ ನಿಂತಿರುತ್ತೇನೆ. ಅಡ್ಯನಡ್ಕ ದಿಂದ ಬರುವಾಗ ಏರು ಮುಖ ರಸ್ತೆಯ ಕೊನೆಯಲ್ಲಿ ಮೈರಾ ಸ್ಥಳ ಸಿಗುತ್ತದೆ ಎಂದರೆ ಸರಿ.

6. ತಕ್ಷಿರು ಆದ ಸಮಯದಲ್ಲಿ ಗಾಜಿನ ಚೂರು ಹೊಡೆದ ರಭಸಕ್ಕೆ ಬಸ್ಸಿನ ಒಳಗೆ ಬಂದು ಬಿದ್ದಿರುತ್ತದೆ. ಬಸ್ಸಿನ ಗಾಜು ಪುಡಿ ಪುಡಿಯಾಗಿ ಬಸ್ಸಿನ ಒಳಗೆ ಮತ್ತು

ಹೊರಗೆ ಬಿದ್ದಿರುತ್ತದೆ. ನನ್ನ ಪ್ರಕಾರ ಚಾಸಾ 1 ರವರಿಗೆ ಕಲ್ಲಿನಿಂದ ಗಾಜಿಗೆ ಹೊಡೆದ ಪರಿಣಾಮ ಗಾಜಿನ ಚೂರು ಅವರಿಗೆ ತಾಗಿರುತ್ತದೆ. ಸಾಮಾನ್ಯವಾಗಿ ದೊಡ್ಡ ಗಾತ್ರದ ಕಲ್ಲಿನಿಂದ ಹೊಡೆದರೆ ಬಸ್ಸಿನ ಮುಂಬಾಗದ ಸಂಪೂರ್ಣ ಗಾಜು ಪೂರ್ತಿ ಬೀಳುತ್ತದೆ ಅಥವಾ ಪುಡಿ ಪುಡಿಯಾಗಿ ಬೀಳುತ್ತದೆ ಎಂದರೆ ಸಾಕ್ಷಿಯು ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಚಾಸಾ 1 ರವರ ಹಣೆಗೆ ಮತ್ತು ಎಡ ಕೈಗೆ ರಕ್ತ ಗಾಯವಾಗಿರುತ್ತದೆ. ಚಾಸಾ 1 ರವರ ಶರ್ಟ್ ಮತ್ತು ಪ್ಯಾಂಟ್ ಗೆ ರಕ್ತ ಅಂಟಿರುತ್ತದೆ. ಘಟನೆಯಾದ ನಂತರ ಬೇರೆ ಬಸ್ ಸ್ಥಳಕ್ಕೆ ಬರುವವರೆಗೂ ಸುಮಾರು 1 ಗಂಟೆಯ ಅವದಿಯ ವರೆಗೆ ಸ್ಥಳದಲ್ಲಿ ಇದ್ದೆವು. ಸದರಿ ಒಂದು ಗಂಟೆಯ ಅವದಿಯಲ್ಲಿ ಪೊಲೀಸರಿಗೆ ಕರೆ ಮಾಡಿ ವಿಚಾರ ತಿಳಿಸಿರುವುದಿಲ್ಲ, ಸಾಕ್ಷಿಯು ಮುಂದುವರಿದು ನಮ್ಮ ಬಸ್ ಡಿಪೋಗೆ ಕರೆ ಮಾಡಿ ತಿಳಿಸಿರುವುದಾಗಿ ನುಡಿದಿರುತ್ತಾರೆ. ನಂತರ ನಮ್ಮ ಬಸ್ಸನ್ನು ಅಲ್ಲಿಯೇ ಬಿಟ್ಟು ಬೇರೆ ಬಸ್ ನಲ್ಲಿ ನಾನು ಮತ್ತು ಚಾಸಾ 1 ರವರು ವಿಟ್ಲ ಪೊಲೀಸ್ ಠಾಣೆಗೆ ಹೋಗಿರುತ್ತೇವೆ.

7. ತಕ್ಷೀರು ಸ್ಥಳದ ರಸ್ತೆ ಕರ್ನಾಟಕ–ಕೇರಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಎಂದರೆ ಸರಿ. ವಿಟ್ಲ ಠಾಣೆಗೆ ಬೆಳಿಗ್ಗೆ 8 ಗಂಟೆಯ ಸಮಯದಲ್ಲಿ ಹೋಗಿರುತ್ತೇವೆ. ನಿ.ಪಿ. 1 ದೂರನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿರುತ್ತೇವೆ. ನಿ.ಪಿ. 1 ದೂರನ್ನು ತಯಾರಿಸಲು ಕಾಸರಗೋಡು ಬಸ್ ಡಿಪೋ ನಿರಿಕ್ಷಕರು ಮಾಹಿತಿ ಕೊಟ್ಟಿರುತ್ತಾರೆ. ಸದರಿ ದಿನದಂದು ಪೊಲೀಸ್ ಠಾಣೆಗೆ ಚಾಸಾ 1 ರವರು ರಕ್ತ ಸಿಕ್ತ ಬಟ್ಟೆಯಲ್ಲಿ ಬಂದಿದ್ದರು. ನಂತರ ಪೊಲೀಸರು ಅಲ್ಲಿಂದ ಚಾಸಾ 1 ರವರನ್ನು ವಿಟ್ಲ ಆಸ್ಪತ್ರೆಗೆ ಹೊಗಲು ತಿಳಿಸಿರುತ್ತಾರೆ. ಆಸ್ಪತ್ರೆಗ ನಾನು ಮತ್ತು ಚಾಸಾ 1 ರವರು ಹೋಗಿರುತ್ತೇವೆ. ಆಸ್ಪತ್ರೆಯಲಿ ಸಂಜೆಯವರೆಗೆ ಇದ್ದೆವು. ಚಾಸಾ 1 ರವರನ್ನು ಹೊರರೋಗಿಯಾಗಿ ಚಿಕಿತ್ಸೆ ನೀಡಿರುತ್ತಾರೆ. ಸದರಿ ದಿನದಂದು ಆಸ್ಪತ್ರೆಗೆ ಪೊಲೀಸರು ಬಂದಿರುತ್ತಾರೆ. ನಂತರ ನಮ್ಮನ್ನು ಪೊಲೀಸ್ ಠಾಣೆಗೆ ಬಂದು ಸಹಿ ಮಾಡಿ ಹೋಗುವಂತೆ ತಿಳಿಸಿದ್ದರು. ಅದರಂತೆ

ನಾವು ಅದೇ ದಿನ ಮದ್ಯಾಹ್ಣ 12 ರಿಂದ 1 ಗಂಟೆಯ ಸಮಯದಲ್ಲಿ ನಾನು ಚಾಸಾ 1 ರವರನ್ನು ಆಸ್ಪತ್ರೇಯಲ್ಲಿ ಬಿಟ್ಟು ಒಬ್ಬನೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಆ ಸಂದರ್ಬದಲ್ಲಿ ನಾನು ಪೊಲೀಸ್ ಠಾಣೆಯಲ್ಲಿ ಎಷ್ಟು ಸಹಿ ಮಾಡಿರುತ್ತೇನೆ ಎಂದು ನೆನಪಿಲ್ಲ.

8. ಸದರಿ ದಿನದಂದು ಬಸ್ ತಕ್ಷೀರು ಸ್ಥಳದಲ್ಲಿ ಎಷ್ಟು ಸಮಯ ಇತ್ತು ಎಂದು ನನಗೆ ಗೊತ್ತಿಲ್ಲ. ಘಟನೆಗೆ ಸಂಬಂದಿಸಿದಂತೆ ಅದೇ ದಿನ ಬೆಳಿಗ್ಗೆ ನಾನು ಪೊಲೀಸರಿಗೆ ಲಿಖಿತ ಹೇಳಿಕೆಯನ್ನು ನನ್ನ ಕೈ ಬರಹದಲ್ಲಿ ಬರೆದು ಕೊಟ್ಟಿರುತ್ತೇನೆ. ಸದರಿ ದಿನದಂದು ಬೆಳಿಗ್ಗೆ ಮತ್ತು ಮದ್ಯಾಹ್ಣ ಪೊಲೀಸ್ ಠಾಣೆಗೆ ಹೋಗಿರುವುದನ್ನು ಹೊರತು ಪಡಿಸಿ ನಂತರ ನಾನು ತಕ್ಷೀರಿಗೆ ಸಂಬಂದಿಸಿದಂತೆ ಪೊಲೀಸ್ ಠಾಣೆಗ ಹೋಗಿರುವುದಿಲ್ಲ. ಆರೋಪಿತರ ಹೆಸರು ವಿಳಾಸವನ್ನು ಪೊಲೀಸರು ನನಗೆ ತಿಳಿಸಿರುತ್ತಾರೆ. ಆರೋೀಪಿತರನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಗೆ ಹೊದಾಗ ಠಾಣೆಯ ಕೊಠಡಿಯಲ್ಲಿ ಇಬ್ಬರು ಆರೋಪಿಗಳು ಇದ್ದರು. ಆ ಸಂದರ್ಬದಲ್ಲಿ ಅವರು ಪ್ಯಾಂಟ್ ಮತ್ತು ಶರ್ಟ್ ಧರಿಸಿದ್ದರು. ಯಾವ ಬಣ್ಣ ಎಂದು ನನಗೆ ನೆನಪಿಲ್ಲ. ನಾನು ಮುಖ್ಯ ವಿಚಾಣರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಘಟನೆಗೆ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ದಾಖಲಿಸಿದ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಸಿತರು ಯಾವುದೇ ರೀತಿ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ ಹಾಗೂ ಯಾವುದೇ ರೀತಿ ನಷ್ಟ ಉಂಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3 ಆರೋಪಿತರ ಪರಃ ಶ್ರೀ ಪಿ.ಪಿ. ಕೆ. ವಕೀಲರಿಂದಃ</u>**

9. ತಕ್ಷೀರಿನ ದಿನದಂದು ನಾನು ಸದರಿ ಬಸ್ಸಿನ ನಿರ್ವಾಹಕನಾಗಿ ಕೆಲಸ ಮಾಡಿದ ಬಗಗೆ ನನ್ನ ಬಳಿ ದಾಖಲೆ ಇಲ್ಲ. ಸಾಕ್ಷಿಯು ಮುಂದುವರಿದ ಇಲಾಖೆಯಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿ ದಿನದಂದು ಬಸ್ಸಿನಲ್ಲಿ ಸುಮಾರು 40 ಪ್ರಯಾಣಿಕರು ಪ್ರಯಾಣಿಸುತ್ತಿದ್ದರು. ಮೈರಾ ಎಂಬ ಸ್ಥಳದಲ್ಲಿ ಇಳಿಯಲು ಪ್ರಯಾಣಿಕರು ಇರಲಿಲ್ಲ. ಆದರೆ ಬಸ್ ಹತ್ತಲು ಪ್ರಯಾಣಿಕರು ಕಾಯುತ್ತಿದ್ದರು. ನನ್ನ ಪ್ರಕಾರ ಪ್ರಯಣಿಕರನ್ನು ಹತ್ತಿಸಿಕೊಳ್ಳಲು ಮೈರಾದಲ್ಲಿ ಬಸ್ ನಿಲ್ಲಿಸಿರುತ್ತೇವೆ. ಆ ಸಂದರ್ಬದಲ್ಲಿ ಬಸ್ಸನ್ನು ನಿಲ್ಲಿಸುವಂತೆ ಒಂದು ಹುಡುಗಿ ಕೈ ತೋರಿಸಿದ್ದು, ಅವರ ಹೆಸರು ಗೊತ್ತಿಲ್ಲ. ತಕ್ಷೀರು ಸ್ಥಳದಲ್ಲಿ ಕಲ್ಲು ಬಿಸಾಡಿದ ವ್ಯಕ್ತಿ ಯಾರು ಎಂದು ನನಗೆ ಆ ಸಂದರ್ಬದಲ್ಲಿ ಗೊತ್ತಾಗಿರಲಿಲ್ಲ. ಮೈರಾದಲ್ಲಿ ಬಸ್ ಹತ್ತಿದ ಹುಡುಗಿಯನ್ನು ಅಲ್ಲಿಗೆ ಬಂದು ಬಸ್ಸಿಗೆ ಕಲ್ಲು ಬಿಸಾಡಿದ ವ್ಯಕ್ತಿಗಳು ಯಾರು ಎಂದು ವಿಚಾರಿಸಿರುವುದಿಲ್ಲ. ಸದರಿ ದಿನದಂದು ಮೈರಾ ದಲ್ಲಿ ಬಸ್ ಹತ್ತಿದ ಹುಡುಗಿಯ ಬಗ್ಗೆ ನಾವು ಪೊಲೀಸರಿಗೆ ಹೇಳಿರುವುದಿಲ್ಲ ಹಾಗೂ ಪೊಲೀಸರು ಸಹ ನಮ್ಮನ್ನು ಕೇಳಿರುವುದಿಲ್ಲ.

10. ಅಡ್ಯನಡ್ಕ ಬಸ್ ನಿಲ್ದಾಣದ ನಂತರ ಮುಂದಿನ ನಿಲ್ದಾಣ ವಿಟ್ಲ ದಲ್ಲಿ ಸಿಗುತ್ತದೆ ಎಂದರೆ ಸರಿ. ಅಡ್ಯನಡ್ಕದಿಂದ ತಕ್ಷೀರು ಸ್ಥಳಕ್ಕೆ ಸುಮಾರು 6 ಕಿ.ಮೀ ಅಂತರ ಇದ್ದು, ತಕ್ಷೀರು ಸ್ಥಳದಿಂದ ವಿಟ್ಲ ಗೆ ಸುಮಾರು 4 ಕಿ.ಮೀ ಅಂತರ ಇದೇ ಎಂದರೆ ಸರಿ. ಅಡ್ಯನಡ್ಕ ದಿಂದ ವಿಟ್ಲ ಗೆ ಹೋಗುವ ರಸ್ತೆ ಹಳ್ಳಿ ಪ್ರದೇಶ ಎಂದರೆ ಸರಿ. ತಕ್ಷೀರು ಆದ ನಂತರ ಸದರಿ ಸ್ಥಳದ ಸ್ಥಳೀಯ ವ್ಯಕ್ತಿಗಳನ್ನು ಕೃತ್ಯ ಮಾಡಿದವರ ಬಗ್ಗೆ ವಿಚಾರಿಸಿರುವುದಿಲ್ಲ. ತಕ್ಷೀರು ಸ್ಥಳದ ಹತ್ತಿರ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ತಕ್ಷಿರು ಆದ ಸಂದರ್ಬದಲ್ಲಿ ಪ್ರಯಾಣಿಕರನ್ನು ಹೊರತು ಪಡಿಸಿ ಬೇರೆ ಸಾರ್ವಜನಿಕರು ಬರಲಿಲ್ಲ. ತಕ್ಷಿರು ಸಂದರ್ಬದಲಿ ಆರೋಪಿತರು ಒಟ್ಟು 3 ಕಲ್ಲುಗಳನ್ನು ಬಸ್ಸಿನ ಮುಂಬಾಗದ ಗಾಜಿಗೆ

ಬಿಸಾಡಿರುತ್ತಾರೆ. ಆ ಸಂದರ್ಬದಲ್ಲಿ ನಾನು ಹಿಂದಿನ ಡೋರ್ ನಿಂದ 2 ಸೀಟು ಮುಂದಕ್ಕೆ ಮಧ್ಯದಲ್ಲಿ ನಿಂತಿರುತ್ತೇನೆ. ಅಡ್ಯನಡ್ಕ ದಿಂದ ಬರುವಾಗ ಏರು ಮುಖ ರಸ್ತೆಯ ಕೊನೆಯಲ್ಲಿ ಮೈರಾ ಸ್ಥಳ ಸಿಗುತ್ತದೆ ಎಂದರೆ ಸರಿ.

11. ತಕ್ಷಿರು ಆದ ಸಮಯದಲ್ಲಿ ಗಾಜಿನ ಚೂರು ಹೊಡೆದ ರಭಸಕ್ಕೆ ಬಸ್ಸಿನ ಒಳಗೆ ಬಂದು ಬಿದ್ದಿರುತ್ತದೆ. ಬಸ್ಸಿನ ಗಾಜು ಪುಡಿ ಪುಡಿಯಾಗಿ ಬಸ್ಸಿನ ಒಳಗೆ ಮತ್ತು ಹೊರಗೆ ಬಿದ್ದಿರುತ್ತದೆ. ನನ್ನ ಪ್ರಕಾರ ಚಾಸಾ 1 ರವರಿಗೆ ಕಲ್ಲಿನಿಂದ ಗಾಜಿಗೆ ಹೊಡೆದ ಪರಿಣಾಮ ಗಾಜಿನ ಚೂರು ಅವರಿಗೆ ತಾಗಿರುತ್ತದೆ. ಸಾಮಾನ್ಯವಾಗಿ ದೊಡ್ಡ ಗಾತ್ರದ ಕಲ್ಲಿನಿಂದ ಹೊಡೆದರೆ ಬಸ್ಸಿನ ಮುಂಬಾಗದ ಸಂಪೂರ್ಣ ಗಾಜು ಪೂರ್ತಿ ಬೀಳುತ್ತದೆ ಅಥವಾ ಪುಡಿ ಪುಡಿಯಾಗಿ ಬೀಳುತ್ತದೆ ಎಂದರೆ ಸಾಕ್ಷಿಯು ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಚಾಸಾ 1 ರವರ ಹಣೆಗೆ ಮತ್ತು ಎಡ ಕೈಗೆ ರಕ್ತ ಗಾಯವಾಗಿರುತ್ತದೆ. ಚಾಸಾ 1 ರವರ ಶರ್ಟ್ ಮತ್ತು ಪ್ಯಾಂಟ್ ಗೆ ರಕ್ತ ಅಂಟಿರುತ್ತದೆ. ಘಟನೆಯಾದ ನಂತರ ಬೇರೆ ಬಸ್ ಸ್ಥಳಕ್ಕೆ ಬರುವವರೆಗೂ ಸುಮಾರು 1 ಗಂಟೆಯ ಅವದಿಯ ವರೆಗೆ ಸ್ಥಳದಲ್ಲಿ ಇದ್ದೆವು. ಸದರಿ ಒಂದು ಗಂಟೆಯ ಅವದಿಯಲ್ಲಿ ಪೊಲೀಸರಿಗೆ ಕರೆ ಮಾಡಿ ವಿಚಾರ ತಿಳಿಸಿರುವುದಿಲ್ಲ, ಸಾಕ್ಷಿಯು ಮುಂದುವರಿದು ನಮ್ಮ ಬಸ್ ಡಿಪೋಗೆ ಕರೆ ಮಾಡಿ ತಿಳಿಸಿರುವುದಾಗಿ ನುಡಿದಿರುತ್ತಾರೆ. ನಂತರ ನಮ್ಮ ಬಸ್ಸನ್ನು ಅಲ್ಲಿಯೇ ಬಿಟ್ಟು ಬೇರೆ ಬಸ್ ನಲ್ಲಿ ನಾನು ಮತ್ತು ಚಾಸಾ 1 ರವರು ವಿಟ್ಲ ಪೊಲೀಸ್ ಠಾಣೆಗೆ ಹೋಗಿರುತ್ತೇವೆ.

12. ತಕ್ಷೀರು ಸ್ಥಳದ ರಸ್ತೆ ಕರ್ನಾಟಕ-ಕೇರಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಎಂದರೆ ಸರಿ. ವಿಟ್ಲ ಠಾಣೆಗೆ ಬೆಳಿಗ್ಗೆ 8 ಗಂಟೆಯ ಸಮಯದಲ್ಲಿ ಹೋಗಿರುತ್ತೇವೆ. ನಿ.ಪಿ. 1 ದೂರನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿರುತ್ತೇವೆ. ನಿ.ಪಿ. 1 ದೂರನ್ನು ತಯಾರಿಸಲು ಕಾಸರಗೋಡು ಬಸ್ ಡಿಪೋ ನಿರಿಕ್ಷಕರು ಮಾಹಿತಿ ಕೊಟ್ಟಿರುತ್ತಾರೆ. ಸದರಿ ದಿನದಂದು ಪೊಲೀಸ್ ಠಾಣೆಗೆ ಚಾಸಾ 1 ರವರು ರಕ್ತ ಸಿಕ್ತ ಬಟ್ಟೆಯಲ್ಲಿ

ಬಂದಿದ್ದರು. ನಂತರ ಪೊಲೀಸರು ಅಲ್ಲಿಂದ ಚಾಸಾ 1 ರವರನ್ನು ವಿಟ್ಲ ಆಸ್ಪತ್ರೆಗೆ ಹೊಗಲು ತಿಳಿಸಿರುತ್ತಾರೆ. ಆಸ್ಪತ್ರೆಗ ನಾನು ಮತ್ತು ಚಾಸಾ 1 ರವರು ಹೋಗಿರುತ್ತೇವೆ. ಆಸ್ಪತ್ರೆಯಲಿ ಸಂಜೆಯವರೆಗೆ ಇದ್ದೆವು. ಚಾಸಾ 1 ರವರನ್ನು ಹೊರರೋಗಿಯಾಗಿ ಚಿಕಿತ್ಸೆ ನೀಡಿರುತ್ತಾರೆ. ಸದರಿ ದಿನದಂದು ಆಸ್ಪತ್ರೆಗೆ ಪೊಲೀಸರು ಬಂದಿರುತ್ತಾರೆ. ನಂತರ ನಮ್ಮನ್ನು ಪೊಲೀಸ್ ಠಾಣೆಗೆ ಬಂದು ಸಹಿ ಮಾಡಿ ಹೋಗುವಂತೆ ತಿಳಿಸಿದ್ದರು. ಅದರಂತೆ ನಾವು ಅದೇ ದಿನ ಮದ್ಯಾಹ್ಞ 12 ರಿಂದ 1 ಗಂಟೆಯ ಸಮಯದಲ್ಲಿ ನಾನು ಚಾಸಾ 1 ರವರನ್ನು ಆಸ್ಪತ್ರೇಯಲ್ಲಿ ಬಿಟ್ಟು ಒಬ್ಬನೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಆ ಸಂದರ್ಬದಲ್ಲಿ ನಾನು ಪೊಲೀಸ್ ಠಾಣೆಯಲ್ಲಿ ಎಷ್ಟು ಸಹಿ ಮಾಡಿರುತ್ತೇನೆ ಎಂದು ನೆನಪಿಲ್ಲ.

13. ಸದರಿ ದಿನದಂದು ಬಸ್ ತಕ್ಷೀರು ಸ್ಥಳದಲ್ಲಿ ಎಷ್ಟು ಸಮಯ ಇತ್ತು ಎಂದು ನನಗೆ ಗೊತ್ತಿಲ್ಲ. ಘಟನೆಗೆ ಸಂಬಂದಿಸಿದಂತೆ ಅದೇ ದಿನ ಬೆಳಿಗ್ಗ ನಾನು ಪೊಲೀಸರಿಗೆ ಲಿಖಿತ ಹೇಳಿಕೆಯನ್ನು ನನ್ನ ಕೈ ಬರಹದಲ್ಲಿ ಬರೆದು ಕೊಟ್ಟಿರುತ್ತೇನೆ. ಸದರಿ ದಿನದಂದು ಬೆಳಿಗ್ಗ ಮತ್ತು ಮದ್ಯಾಹ್ಞ ಪೊಲೀಸ್ ಠಾಣೆಗೆ ಹೋಗಿರುವುದನ್ನು ಹೊರತು ಪಡಿಸಿ ನಂತರ ನಾನು ತಕ್ಷೀರಿಗೆ ಸಂಬಂದಿಸಿದಂತೆ ಪೊಲೀಸ್ ಠಾಣೆಗ ಹೋಗಿರುವುದಿಲ್ಲ. ಆರೋಪಿತರ ಹೆಸರು ವಿಳಾಸವನ್ನು ಪೊಲೀಸರು ನನಗೆ ತಿಳಿಸಿರುತ್ತಾರೆ. ಆರೋೀಪಿತರನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಗೆ ಹೊದಾಗ ಠಾಣೆಯ ಕೊಠಡಿಯಲ್ಲಿ ಇಬ್ಬರು ಆರೋಪಿಗಳು ಇದ್ದರು. ಆ ಸಂದರ್ಬದಲ್ಲಿ ಅವರು ಪ್ಯಾಂಟ್ ಮತ್ತು ಶರ್ಟ್ ಧರಿಸಿದ್ದರು. ಯಾವ ಬಣ್ಣ ಎಂದು ನನಗೆ ನೆನಪಿಲ್ಲ. ನಾನು ಮುಖ್ಯ ವಿಚಾಣರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದದಿಲ್ಲ ಎಂದರೇ ಸರಿಯಲ್ಲ. ನಾನು ಹೇಳಿದ ಘಟನೆಗೆ ಆರೋೀಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಆರೋಪಿತರ ವಿರುದ್ಧ ದಾಖಲಿಸಿದ ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ ಹಾಗೂ ಯಾವುದೇ ರೀತಿ ನಷ್ಟ ಉಂಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರರಣೆಯಲ್ಲಿ ಅಕ್ಷಯ ರಜಪೂತ್ ರವರು ಹೇಳಿ ಕೊಟ್ಟಂದತೆ ಆರೋಪಿತರು ಕೃತ್ಯ ಎಸಗಿರುವುದಾಗಿ ಠಾಣೆಯಲ್ಲಿ ಹೇಳಿರುವುದಾಗಿ ಹೇಳಿದ್ದು, ಸದರಿ ವಿಚಾರವನ್ನು ಅವರು ಪೊಲೀಸರಿಗೆ ಹೇಳಿರುತ್ತಾರೆ. ಯಾವ ಪೊಲೀಸರಿಗೆ ಸದರಿ ವಿಚಾರವನ್ನು ಹೇಳಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ವಿಚಾರವನ್ನು ಪ್ರಥಮ ಬಾರಿಗೆ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ಹೇಳಿಕೆಯನ್ನು ನಾನು ನ್ಯಾಯಾಲಯದ ಮುಂದೆ ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ